ಓ.ಎಸ್. ನಂಬರ 90/2016

ಪಿಡಬ್ಲ್ಯೂ-1.

ಸಾಕ್ಷಿದಾರರಿಗೆ ಇಂದು ದಿನಾಂಕಃ 05-10-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀಮತಿ ಎ ಎಸ್ ಎಸ್ , 1,5,6 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ತಂದೆ ವಿರುಪಾಕ್ಷಪ್ಪ ಮತ್ತು ನಾನು ನಮ್ಮ ಕುಟುಂಬದ ಆಸ್ತಿಗಳನ್ನು ಎಷ್ಟು ಸಲ ವಾಂಟಣಿ ಮಾಡಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಒಂದೇ ಸಲ ಎಂದು ಉತ್ತರಿಸುತ್ತಾರೆ. ದಿಃ 02-12-1988 ರಂದು ಒಂದು ವಾಂಟಣಿ ಪತ್ರವನ್ನು ಮಾಡಿಕೊಂಡು ತಹಶೀಲ್ದಾರವರಿಗೆ ಕೊಟ್ಟಿದ್ದೀರಿ ಅದನ್ನು ಎಲ್ಲಿ ಮಾಡಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಇದೆಲ್ಲ ಸುಳ್ಳು ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು 1980 ರಲ್ಲಿ ಶಿರಸಿ ಸಬ್ ರಿಜಿಸ್ಟ್ರಾರ್ ರವರ ಆಫೀಸಿನಲ್ಲಿ ಒಂದೇ ವಾಂಟಣಿ ಪತ್ರ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಇದನ್ನು ಬಿಟ್ಟು ಯಾವುದು ಮಾಡಿಸಿರುವುದಿಲ್ಲ. ನನ್ನ ತಂಗಿಯ ಜಮೀನಿನಲ್ಲಿ ಅಜಮಾಸು 20 ರಿಂದ 25 ಮರಗಳಿದ್ದವು. ಆ ಮರಗಳು ಈಗ ಕಡಿದುಕೊಂಡು ಹೋಗಿರುತ್ತಾರೆ. ಮನೆ ಬೀಳಕೈತಿ ಅದಕ್ಕೆ ಕಡೆದುಕೊಂಡು ಹೋಗುತ್ತೇನೆ ಎಂದು ಕೇಳಿದಾಗ ಹೇಗೂ ನೀನೆ ಹಿಸ್ಸೆಯಲ್ಲಿ ಇದ್ದೀಯ ಕಡಿದುಕೊಂಡು ಹೋಗು ಎಂದು ಹೇಳಿರುತ್ತೇನೆ. ಅಲ್ಲಿ ಅಜಮಾಸು 200 ಮರಗಳು ಇತ್ತು ಎಂದರೆ ಸರಿಯಲ್ಲ. ಸದ್ರಿ ಜಮೀನಿನ ಮಾಲಕರಾದ ಯಲ್ಲವ್ವರವರು ಸರಕಾರದಿಂದ ಅನುಮತಿಯನ್ನು ಪಡೆದು 200 ಮರಗಳನ್ನು ಕಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಯ ಮೇಲಿರುವ ಭೋಜವನ್ನು ಕಡಿಮೆ ಮಾಡಿಸಿಕೊಳ್ಳುವ ಉದ್ದೇಶಕ್ಕಾಗಿ ಅಪ್ಲಿಕೇಶನ್ ನನ್ನು ಹಾಕಿ ಭೋಜವನ್ನು ಕಡಿಮೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ ದಾವಾಸ್ತಿಗೆ ಸಂಬಂಧಿಸಿದಂತೆ ಎಲ್ಲ ದಾಖಲಾತಿಗಳನ್ನು ಒದಗಿಸಿ ಅದರ ಮೇಲೆ ಇದ್ದಂತಹ 15 ವರ್ಷಗಳ ಷರತ್ತನ್ನು ಸಹ ಕಡಿಮೆ ಮಾಡಿಸಿಕೊಂಡಿದ್ದಾಳೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಅದಾದ ನಂತರ ದಿಃ 13-12-1999 ಕ್ಕೆ ಪೂರ್ತಿ ಕಂದಾಯ ಚುಕ್ತ ಮಾಡಿ ಸರ್ಟಿಫಿಕೇಟನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ.

2. ದಿಃ 14-05-2001 ರಂದು, ದಿಃ 16-05-2001 ರಂದು, ದಿಃ 22-05-2001 ರಂದು ಮೂರು ಸಲ ಪ್ರತ್ಯೇಕ ಪ್ರತ್ಯೇಕವಾಗಿ ಫಾರೆಸ್ಟ ಡಿಪಾರ್ಟಮೆಂಟ್ ನಿಂದ ಪರವಾನಿಗೆ ಪಡೆದುಕೊಂಡು ಮರ ಕಟಾವು ಮಾಡಿಕೊಂಡು ಹೋದರು ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ ಫಾರೆಸ್ಟ ಡಿಪಾರ್ಟಮೆಂಟ್ ರವರು ಅವುಗಳಿಗೆಲ್ಲ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ ಆಕೆ ಕೊಟ್ಟಿರುವ ಅರ್ಜಿಯ ಮೇಲೆ ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ವಲಯ ಅರಣ್ಯಾಧಿಕಾರಿಗಳು ಆದೇಶ ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಈ ರೀತಿಯ ಆದೇಶವನ್ನು ದಿಃ 25-05-2001 ಕ್ಕೆ ನೀಡಲಾಗಿದೆ ಎಂದರೆ ಸಾಕ್ಷಿಯು ಅದೆಲ್ಲ ಡೂಪ್ಲಿಕೇಟ್ ಎಂದು ಉತ್ತರಿಸುತ್ತಾರೆ. ಸದ್ರಿ ಆದೇಶದಲ್ಲಿ ಮಂಜೂರಿಯ ಪೂರ್ವದಲ್ಲಿ ಎಷ್ಟು ಮರ ಇತ್ತು ಆನಂತರ ಮಂಜೂರಿಯಾದ ಮೇಲೆ ಎಷ್ಟು ಮರ ಇತ್ತು ಎಂದು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಸದ್ರಿ

ಭೂಮಿಯಲ್ಲಿ ರೂಪಾಂತರ ಮಾಡಲಿಕ್ಕೆ ಷರತ್ತನ್ನು ಹಾಕಿ ಮಂಜೂರಿ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. 1994–95 ರಲ್ಲಿ ಆಕೆಯ ಪಾಲಿಗೆ ಕೊಟ್ಟನಂತರ ಈ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದೆಲ್ಲ ಸುಳ್ಳು ಆಕೆಗೆ ನಾವು ಪಾಲೇ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಪೂರ್ತಿ ಸರ್ವೇ ನಂಬರಿಗೆ ಸಂಬಂಧಿಸಿದಂತೆ ಉಳಿದಂತೆ ಎಲ್ಲ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಮನೆ ಬಿದ್ದು ಹೋಗಿದೆ ಅದಕ್ಕೆ ಮನೆ ಕಟ್ಟಿಕೊಳ್ಳಲು ಮರ ಬೇಕು ಎಂದು ಕೇಳಿದ್ದಕ್ಕೆ ಅಪ್ಪಣೆ ಕೊಟ್ಟಿರುತ್ತೇನೆ, ಮುಂದುವರೆದು ಇದೆಲ್ಲ ಸುಳ್ಳು ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಹಾಕುವ 2 ವರ್ಷದ ಪೂರ್ದಲ್ಲಿ ನಮ್ಮ ಆಸ್ತಿಗಳನೆಲ್ಲ ಮಾರಾಟ ಮಾಡಿದ್ದೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮಗ ಮಾಡಿಕೊಂಡಿದ್ದಾನೆ ನಾವು ಮಾಡಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಗೆ ಅವರಿಗೆ ಸೇರಿದ ಆಸ್ತಿಯಲ್ಲಿ 2 ಎಕರೆಯನ್ನು ಹಣಕಾಸಿನ ತೊಂದರೆ ಉಂಟಾದಾಗ ಮಾರಾಟ ಮಾಡುವ ಅಧಿಕಾರ ಅವರಿಗೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಅಧಿಕಾರ ಇರಲಿಲ್ಲ ಫೋರ್ಜರಿ ಮಾಡಿ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಮ್ಮ ಸಹಿ ಇಲ್ಲದೆಯೇ ಮಾರಿಕೊಂಡಿರುತ್ತಾರೆ. ನಾವು ಮಾರಾಟ ಮಾಡುವಾಗ ಆಕೆ ಸಣ್ಣವಳಿದ್ದು ಅದಕ್ಕೆ ಅವಳ ಸಹಿ ತೆಗೆದುಕೊಂಡಿರುವುದಿಲ್ಲ. ನಾವು ಮಾರಾಟ ಮಾಡುವಾಗ 1 ನೇ ಪ್ರತಿವಾದಿ ಸಣ್ಣವಳಿರಲಿಲ್ಲ ಆಕೆಗೆ 7 ಜನ ಮಕ್ಕಳಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಇದೆಲ್ಲ ಸುಳ್ಳು ಎಂದು ಉತ್ತರಿಸುತ್ತಾರೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ವಾಂಟಣಿ ಆಗಿದೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ಯಾವಾಗ ವಾಂಟಣಿ ಆಗಿತ್ತೊ ನನಗೆ ದ್ಯಾಸ ಇಲ್ಲ. ಪಿತ್ರಾರ್ಜಿತ ಆಸ್ತಿಗಳಲ್ಲಿ ನಾವು ವಾಂಟಣಿ ಮಾಡಿಕೊಂಡಿದ್ದು ಅಕೆಗೂ ತಹಶೀಲ್ದಾರ್ ಕಛೇರಿಯಲ್ಲಿ ಪಾಲು ಕೊಟ್ಟಿರುತ್ತೇವೆ. ಇದನ್ನು ಎಷ್ಟನೇ ಇಸ್ವಿಯಲ್ಲಿ ಮಾಡಿಕೊಟ್ಟಿದ್ದೆವೋ ನನಗೆ ದ್ಯಾಸಿಲ್ಲ. ನೋಂದು ಮಾಡಿಕೊಟ್ಟಿಲ್ಲ ತಹಶೀಲ್ದಾರ್ ಕೋರ್ಟನಲ್ಲಿ ಮಾಡಿಕೊಟ್ಟಿರುತ್ತೇವೆ. ತಹಶೀಲ್ದಾರ್ ಕೋರ್ಟನಲ್ಲಿ ಮೂರು ಪಾಲು ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ವಾಂಟಣಿ ಮಾಡಿಕೊಂಡಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ನೋಟೀಸು ಬಂದಿತ್ತು ಅದನ್ನು ವಕೀಲರಿಗೆ ಕೊಟ್ಟಿದ್ದೇವೆ ಅದನ್ನು ಕೋರ್ಟಿಗೆ ಕೊಟ್ಟಿದ್ದಾರೋ ಇಲ್ಲೋ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಗೆ ದಾವಾಸ್ತಿ ಪಾಲು ಕೊಟ್ಟಿದ್ದು ಆ ಆಸ್ತಿ ಕೊಟ್ಟ ನಂತರ 22 ವರ್ಷಗಳು ಕಳೆದ ನಂತರ ಆಕೆಗೆ ಕೊಟ್ಟಿರುವ ಪಾಲಿನಲ್ಲಿ ಈಗ ದಾವೆಯನ್ನು ಹಾಕಿಕೊಂಡು ಪಾಲನ್ನು ಕೇಳಿಕೊಂಡು ಬಂದಿದ್ದೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಪಾಲಿಗೆ ಸಂಬಂಧಿಸಿದಂತೆ ಕೇಳಿಕೊಂಡು ಬಂದಿದ್ದೇವೆ ಎಂದು ಉತ್ತರಿಸುತ್ತಾರೆ. ದಾವಾಸ್ತಿಯಲ್ಲಿ ನನಗಾಗಲಿ ಅಥವಾ ನನ್ನ ತಮ್ಮನಿಗಾಗಲಿ ಯಾವುದೇ ಪಾಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂಗಿಯ ವಿರುದ್ಧ ದುಡ್ಡು ಎಬ್ಬಿಸಬೇಕು ಮತ್ತು ತೊಂದರೆ ಕೊಡಬೇಕು ಎಂಬ ಉದ್ದೇಶಕ್ಕಾಗಿ ಈ ಪ್ರಕರಣ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

ಸಿವಿಲ್ ಜಡ್ಜ, ಮುಂಡಗೋಡ.